# ಹೊಸಿಲ ದಾಟಿ ಹೊರಟಿರುವೆ





■ ಜ್ಯೋತಿ ಎ.

ಅಧ್ಯಕ್ಷೆ, ಭಾರತೀಯ ಮಹಿಳಾ ಒಕ್ಕೂಟ


ಮನುಷ್ಯರು ಪರಸ್ಪರ ಭಯ, ಆತಂಕ, ಸಂದೇಹಗಳಲ್ಲೇ ವ್ಯವಹರಿಸುವಂತಹ ಕಾಲವೀಗ ಸೃಷ್ಟಿಯಾಗಿದೆ. ನಮ್ಮ ದೇಶ–ಗ್ರಾಮಗಳಲ್ಲೇ ನಾವು ಪರಕೀಯರಾಗುವಂತಹ ವಿಚಿತ್ರ, ಸಂಕಟದ ಸನ್ನಿವೇಶ ನಿರ್ಮಾಣವಾಗಿದೆ. ಎಲ್ಲವೂ ಸ್ತಬ್ಧವಾದರೂ ನಮ್ಮ ಸಾರ್ವಜನಿಕ ಸ್ವತ್ತಿನ ಮಾರಾಟಕ್ಕೆ ಮಾತ್ರ ಸರ್ಕಾರಗಳು ಯಾವುದೇ ಬ್ರೇಕ್ ಹಾಕಿಲ್ಲ. ವೈಯಕ್ತಿಕ ಮತ್ತು ಸಾಮುದಾಯಿಕ ನೆಲೆಗಳಲ್ಲೂ 2020 ಹಿಂದೆಂದೂ ಅನುಭವಿಸಿರದಂತಹ ಯಾತನಾಮಯ ವರ್ಷವಾಗಿದೆ.

2021ರಲ್ಲಾದರೂ ಮನುಷ್ಯ ಮನುಷ್ಯನಾಗಿ, ಎಲ್ಲರೂ ಸುಖ ಸಮೃದ್ಧಿಯಿಂದ ಆರೋಗ್ಯಕರವಾಗಿ ಬದುಕಬೇಕೆನ್ನುವ ನಿರೀಕ್ಷೆ ನನ್ನದಾಗಿದೆ. ಆದರೆ ಇಂದಿನ ಸಮಾಜೋರಾಜಕೀಯ ಪರಿಸ್ಥಿತಿಯಲ್ಲಿ ನನ್ನೀ ಆಶಯ ಈಡೇರುವುದೇ ಎಂಬುದು ಬೇರೆ ಮಾತು. ಕನಸುಗಳಿಲ್ಲದೆ ಮನುಷ್ಯ ಮುನ್ನಡೆಯಲಾರ, ಅವುಗಳನ್ನು ಪೂರೈಸಿಕೊಳ್ಳಲು ಅವನು/ಅವಳು ತಮ್ಮ ವಿರೋಧಿಶಕ್ತಿಗಳ ಜತೆ ತಾತ್ವಿಕ ಸಂಘರ್ಷ ನಡೆಸಲೇಬೇಕು. ಸರ್ಕಾರ ಜಾರಿಗೆ ತರುತ್ತಿರುವ ಕರಾಳ ಕಾನೂನುಗಳ ವಿರುದ್ಧ ದೇಶವೇ ದಂಗೆಯೆದ್ದು ಲೂಟಿಕೋರ ಕಾರ್ಪೊರೇಟ್ ಕಂಪನಿಗಳ ವಿರುದ್ಧ ಭಾರತದಾದ್ಯಂತ ಹೋರಾಟ ಆರಂಭವಾಗಬೇಕು. ಸೌಹಾರ್ದತೆಯ ತಂಪನ್ನೆರೆದು ಹಸಿವೆಯಿಲ್ಲದ ಬಹುತ್ವ ಭಾರತದ ಪುನರ್ ನಿರ್ಮಾಣವಾಗಬೇಕು; ದಲಿತರು, ಮಹಿಳೆಯರು ಮತ್ತು ಮಕ್ಕಳು ಘನತೆಯಿಂದ ನಿರಾತಂಕವಾಗಿ ಜೀವಿಸುವಂತಹ ವಾತಾವರಣ ಸೃಷ್ಟಿಯಾಗಬೇಕು ಎನ್ನುವುದೇ ನನ್ನ ನಿರೀಕ್ಷೆಯಾಗಿದೆ.

> ದಲಿತರು, ಮಹಿಳೆಯರು ಮತ್ತು ಮಕ್ಕಳು ಘನತೆಯಿಂದ ನಿರಾತಂಕವಾಗಿ ಜೀವಿಸುವಂತಹ ವಾತಾವರಣ ಸೃಷ್ಟಿಯಾಗಬೇಕು.

ಹೊಸಿಲ ದಾಟಿ ಹೊರಟಿರುವೆ  
ಓ! ಹಳೇ ವರುಷವೇ,  
ಬೀಳ್ಕೊಡುವಾಗ ವಿಷಾದವನೂ  
ಸೂಚಿಸಲೇನು ನಿನಗೆ ನಾನು?  
ನವವರುಷವೇ ನೀ ಕಾದು ನಿಂತು  
ಹೊಸಿಲ ಮೆಟ್ಟಿ ಒಳ ಇಣುಕಿಹೆ,  
ಇನ್ನಾದರೂ ಮೂಡಲಿ  
ಬೆಳಕು ಬೆಳದಿಂಗಲು ಕತ್ತಲ ಈ ಜಗಕೆ.

ನೆತ್ತರ ಹೊಳೆಯಲಿ ಮಿಂದು  
ಹಸಿದ ಹೊಟ್ಟೆಯಲಿ ಬೆಂದು  
ನೊಂದಿಹಳು ತಾಯಿ.  
ನೀನಾದರೂ ಕರುಣಿಸವಳಿಗೆ  
ಸುಖ ಶಾಂತಿ ನೆಮ್ಮದಿಗಳ.  
ಮುಂದೂಡದಿರು ಈ ನನ್ನ ಬೇಡಿಕೆಯ  
ಹೊಸ ವರುಷವೇ  
ಕಾದಿಹೆವು ಕಾತುರದಿ  
ಸವಿಯಲು ನಿನ್ನಯ ಸೊಬಗ. ■

